**ಕರ್ನಾಟಕ ಸರ್ಕಾರ**

**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ:ಸಚುಆ/ಚುನಾವಣಾ ದಾವೆ/ಸ.ವ.ನೇ/53/2014-15

3 ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್,
ಶಾಂತಿನಗರ, ಬೆಂಗಳೂರು.
ದಿನಾಂಕ: 27.05.2014

## ಸುತ್ತೋಲೆ

**ವಿಷಯ:-** ಕಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯಗಳಲ್ಲಿ ದಾಖಲಾಗುವ ಚುನಾವಣಾ ದಾವೆಗಳಿಗೆ ಸಂಬಂಧಿಸಿದಂತೆ ಸರ್ಕಾರಿ ವಕೀಲರನ್ನು ನೇಮಕ ಮಾಡುವ ಬಗ್ಗೆ.

**ಉಲ್ಲೇಖ:-** 1) ಸರ್ಕಾರದ ಪತ್ರ ಸಂಖ್ಯೆ: ಸಿಒ/29/ಸಿಡಬ್ಲ್ಯೂಪಿ/2014 ದಿನಾಂಕ: 28.04.2014

2) ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಒ/04/ಸಿಡಬ್ಲ್ಯೂಪಿ/2014 ದಿನಾಂಕ: 17.01.2014

***

ಕರ್ನಾಟಕ ರಾಜ್ಯದಲ್ಲಿ ಸಹಕಾರ ಚುನಾವಣಾ ಆಯೋಗವು ಅಸ್ತಿತ್ವಕ್ಕೆ ಬಂದ ನಂತರ, ಸಹಕಾರ ಸಂಘಗಳ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಆಯೋಗದ ನಿರ್ದೇಶನ, ಮಾರ್ಗದರ್ಶನ ಹಾಗೂ ನಿಯಂತ್ರಣದ ಮೇರೆಗೆ ನಡೆಸಲಾಗುತ್ತಿರುವ ವಿಷಯ ನಿಮಗೆ ತಿಳಿದಿದೆ. ಈ ರೀತಿ ಚುನಾವಣೆ ನಡೆಸಿದ ನಂತರ ಅಥವಾ ಚುನಾವಣಾ ಪೂರ್ವ ಚುನಾವಣೆ ನಡೆಸುವಿಕೆಗೆ ಸಂಬಂಧಿಸಿದಂತೆ ಆಯೋಗದ, ಜಿಲ್ಲಾ ಚುನಾವಣಾಧಿಕಾರಿಗಳ ಹಾಗೂ ರಿಟರ್ನಿಂಗ್ ಅಧಿಕಾರಿಗಳ ಆದೇಶ /ಕ್ರಮದಿಂದ ಬಾಧಿತರಾದ ಸದಸ್ಯರು ಸಂಘದ ವ್ಯಾಪ್ತಿಯ ಸಿವಿಲ್ ನ್ಯಾಯಾಲಯದಲ್ಲಿ ಚುನಾವಣೆಗೆ ಸಂಬಂಧಿಸಿದ ದಾವೆಯನ್ನು ಹೂಡುತ್ತಿರುವ ವಿಷಯವು ನಿಮಗೆ ತಿಳಿದಿದೆ. ಈ ದಾವೆಗಳಲ್ಲಿ ಆಯೋಗವನ್ನು, ಜಿಲ್ಲಾ ಚುನಾವಣಾಧಿಕಾರಿಗಳನ್ನು ಹಾಗೂ ರಿಟರ್ನಿಂಗ್ ಅಧಿಕಾರಿಗಳನ್ನು ಪ್ರತಿವಾದಿಗಳನ್ನಾಗಿ ಮಾಡಲಾಗುತ್ತಿದ್ದು, ಇವರ ಪರವಾಗಿ ನ್ಯಾಯಾಲಯಗಳಲ್ಲಿ ಪ್ರತಿನಿಧಿಸಲು ಸರ್ಕಾರಿ ವಕೀಲರನ್ನು ನೇಮಿಸುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತಿತ್ತು.

ವಿವಿಧ ನ್ಯಾಯಾಲಯಗಳಲ್ಲಿ ದಾಖಲಾಗುವ ದಾವಾ ಪ್ರಕರಣಗಳಲ್ಲಿ ಸರ್ಕಾರ /ಇಲಾಖಾಧಿಕಾರಿಗಳನ್ನು ಪ್ರತಿವಾದಿಗಳನ್ನಾಗಿ ಮಾಡಿದ್ದಾಗ, ಅವರ ಪರವಾಗಿ ನ್ಯಾಯಾಲಯದಲ್ಲಿ ಪ್ರತಿನಿಧಿಸಲು ಸರ್ಕಾರಿ ವಕೀಲರನ್ನು ನೇಮಕ ಮಾಡಲು ಪ್ರಸ್ತಾವೆ ಸಲ್ಲಿಸುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳ ಬಗ್ಗೆ ಸರ್ಕಾರವು ಉಲ್ಲೇಖ (2) ರಲ್ಲಿ ಕಾಣಿಸಿರುವಂತೆ ಈಗಾಗಲೇ ಸುತ್ತೋಲೆಯನ್ನು ಹೊರಡಿಸಿದ್ದು ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ಪ್ರತಿಯನ್ನು ಕಳುಹಿಸಲಾಗಿದೆ. ಸದರಿ ಸುತ್ತೋಲೆಯ ಮುಖ್ಯಾಂಶ ಕೆಳಕಂಡಂತಿರುತ್ತದೆ.

1) ಸರ್ಕಾರಿ ವಕೀಲರ ನೇಮಕಾತಿ ಪ್ರಸ್ತಾವೆಯೊಂದಿಗೆ ಆಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ನ್ಯಾಯಾಲಯವು ನೀಡಿರುವ ಸೂಚನೆ / ಸಮನ್ಸ್‌ನ ಮೂಲ ಪ್ರತಿಯನ್ನು ಲಗತ್ತಿಸಿರತಕ್ಕದ್ದು.

2) ಆಯಾ ಪ್ರಕರಣ /ದಾವೆಗೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ಸ್ವೀಕೃತವಾಗಿರುವ ದಾವಾ ಪ್ರಕರಣದ ಎರಡು ಪ್ರತಿಗಳನ್ನು ಲಗತ್ತಿಸತಕ್ಕದ್ದು. ಈ ಪ್ರತಿಗಳಲ್ಲಿ ಪ್ರಕರಣ ಸಂಖ್ಯೆ, ಕಕ್ಷಿದಾರರು ಮತ್ತು ಪ್ರತಿವಾದಿಗಳ (Petitioners and Respondents) ವಿವರ ಸ್ಪಷ್ಟವಾಗಿರತಕ್ಕದ್ದು.

3) ಆಯಾ ಪ್ರಕರಣ /ದಾವೆಯ ಸಂಬಂಧವಾಗಿ ದಾಖಲಾತಿಗಳನ್ನು ಸತ್ಯಾಪನೆ ಮಾಡುವ ಅಧಿಕಾರಿಯ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಒದಗಿಸತಕ್ಕದ್ದು.

4) ಸಿವಿಲ್ ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಧೀಶರು (ಕಿರಿಯ ಶ್ರೇಣಿ) ಹಾಗೂ ತತ್ಸಮಾನ ನ್ಯಾಯಾಧೀಶರ ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳ ಸಂಬಂಧವಾಗಿ ಸರ್ಕಾರಿ ವಕೀಲರ ನೇಮಕಾತಿ ಪ್ರಸ್ತಾವನೆಗಳನ್ನು ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯ, ಕೆ.ಹೆಚ್.ಬಿ ಕಾಂಪ್ಲೇಕ್ಸ್, ಕಾವೇರಿ ಭವನ, ಬೆಂಗಳೂರು 09 ಇವರಿಗೆ ನೇರವಾಗಿ ಸಲ್ಲಿಸಿ ಸರ್ಕಾರಿ ವಕೀಲರ ನೇಮಕಾತಿ ಆದೇಶ ಪಡೆಯತಕ್ಕದ್ದು.

ಮೇಲ್ಕಂಡ ಮಾರ್ಗಸೂಚಿಗಳಂತೆ ಪ್ರಸ್ತಾವೆಗಳನ್ನು ಕಳುಹಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಈ ಮೂಲಕ ಸೂಚಿಸಲಾಗಿದೆ. ಸರ್ಕಾರದ ಸುತ್ತೋಲೆಯ ಪ್ರತಿಯನ್ನು ಈ ಕೂಡ ಲಗತ್ತಿಸಿದೆ.

(ಎನ್.ಸಿ. ಮುನಿಯಪ್ಪ)
**ಸಹಕಾರ ಚುನಾವಣಾ ಆಯುಕ್ತರು**
**ಬೆಂಗಳೂರು**

**ಪ್ರತಿಗಳು:-**

1) ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು
2) ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು
3) ಎಲ್ಲಾ ಉಪ ವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರು
4) ಆಯೋಗದ ಎಲ್ಲಾ ಅಧಿಕಾರಿಗಳು /ಶಾಖಾ ಮುಖ್ಯಸ್ಥರಿಗೆ
5) ಸುತ್ತೋಲೆ ಕಡತ /ರಕ್ಷಾ ಕಡತ

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆ/04 /ಸಿಡಬ್ಲ್ಯೂಪಿ/2014.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.01.2014.

# " ಸುತ್ತೋಲೆ "

**ವಿಷಯ:** ವಿವಿಧ ನ್ಯಾಯಾಲಯ ಪ್ರಕರಣಗಳಲ್ಲಿ ಸರ್ಕಾರ / ಇಲಾಖಾಧಿಕಾರಿಗಳು ಪ್ರತಿವಾದಿಗಳಾಗಿದ್ದಾಗ ಸರ್ಕಾರ ಮತ್ತು ಸರ್ಕಾರದ ಅಧಿಕಾರಿಗಳ ಪರವಾಗಿ ನ್ಯಾಯಾಲಯದಲ್ಲಿ ಪ್ರತಿನಿಧಿಸಲು ಸರ್ಕಾರಿ ವಕೀಲರನ್ನು ನೇಮಕ ಮಾಡಲು ಪ್ರಸ್ತಾವೆ ಸಲ್ಲಿಸುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳು.

***

ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯ, ಉಚ್ಛ ನ್ಯಾಯಾಲಯ, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಗಳು ಹಾಗೂ ಇತರೆ ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳಲ್ಲಿ ಸರ್ಕಾರ ಮತ್ತು ಸರ್ಕಾರದ ಅಧಿಕಾರಿಗಳ ಪರವಾಗಿ ನ್ಯಾಯಾಲಯದಲ್ಲಿ ಪ್ರತಿನಿಧಿಸಲು ಸರ್ಕಾರಿ ವಕೀಲರಿಗೆ ಅಧಿಕಾರ ನೀಡಿ ಆದೇಶ ಹೊರಡಿಸಲು - ಸಂಬಂಧಪಟ್ಟ ಪ್ರಕರಣದ ಪ್ರಸ್ತಾವನೆಯನ್ನೊಳಗೊಂಡ ಕಡತಗಳನ್ನು ಕಾನೂನುಕೋಶದ ಮುಖ್ಯಸ್ಥರಿಗೆ ಸಲ್ಲಿಸುತ್ತಿದ್ದು, ಬಹಳಷ್ಟು ಕಡತಗಳನ್ನು - ಕಾನೂನು ಕೋಶದ ಮುಖ್ಯಸ್ಥರು ಸ್ಪಷ್ಟ ಮಾಹಿತಿ ಹಾಗೂ ಮೂಲ ದಾಖಲಾತಿಗಳೊಂದಿಗೆ ಕಡತಗಳನ್ನು ಸಲ್ಲಿಸಲು ತಿಳಿಸಿ ಹಿಂದಿರುಗಿಸುತ್ತಿದ್ದಾರೆ. ಆದುದರಿಂದ, ಸರ್ಕಾರಿ ವಕೀಲರ ನೇಮಕಾತಿಯಲ್ಲಿ ಆಗುತ್ತಿರುವ ಅನಗತ್ಯ ವಿಳಂಬವನ್ನು ತಪ್ಪಿಸಿ, ಶೀಘ್ರವಾಗಿ ಸರ್ಕಾರಿ ಆದೇಶ ಹೊರಡಿಸಲು ಅನುವಾಗುವಂತೆ ಇಂತಹ ಪ್ರಸ್ತಾವ ಸಲ್ಲಿಸುವಾಗ ಈ ಕೆಳಕಂಡ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

1. ಸರ್ಕಾರಿ ವಕೀಲರ ನೇಮಕಾತಿ ಪ್ರಸ್ತಾವೆಯೊಂದಿಗೆ ಆಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ನ್ಯಾಯಾಲಯವು ನೀಡಿರುವ ಸೂಚನೆ / ಸಮನ್ಸ್‌ನ ಮೂಲ ಪ್ರತಿಯನ್ನು ಲಗತ್ತಿಸತಕ್ಕದ್ದು.
2. ಆಯಾ ಪ್ರಕರಣ / ದಾವೆಗೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ಸ್ವೀಕೃತವಾಗಿರುವ ಪ್ರಕರಣದ / ದಾವೆಯ ಎರಡು ಪ್ರತಿಗಳನ್ನು ಲಗತ್ತಿಸತಕ್ಕದ್ದು. ಈ ಪ್ರತಿಗಳಲ್ಲಿ ಪ್ರಕರಣ ಸಂಖ್ಯೆ, ಕಕ್ಷಿದಾರರು ಮತ್ತು ಪ್ರತಿವಾದಿಗಳ ವಿವರ ಸ್ಪಷ್ಟವಾಗಿರತಕ್ಕದ್ದು.
3. ಆಯಾ ಪ್ರಕರಣ / ದಾವೆಯ ಸಂಬಂಧವಾಗಿ ದಾಖಲಾತಿಗಳನ್ನು ಸತ್ಯಾಪನೆ ಮಾಡುವ ಅಧಿಕಾರಿಯ ಬಗ್ಗೆ ಸ್ಪಷ್ಟ ಮಾಹಿತಿ ಒದಗಿಸತಕ್ಕದ್ದು.
4. ಸಿವಿಲ್ ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಧೀಶರು (ಕಿರಿಯ ಶ್ರೇಣಿ) ಹಾಗೂ ತತ್ಸಮಾನ ನ್ಯಾಯಾಧೀಶರ ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳ ಸಂಬಂಧವಾಗಿ ಸರ್ಕಾರಿ ವಕೀಲರ ನೇಮಕಾತಿ ಪ್ರಸ್ತಾವನೆಗಳನ್ನು ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯ, ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು-09. ಇವರಿಗೆ ನೇರವಾಗಿ ಸಲ್ಲಿಸಿ, ಸರ್ಕಾರಿ ವಕೀಲರ ನೇಮಕಾತಿ ಆದೇಶ ಪಡೆಯತಕ್ಕದ್ದು.

→

ಮೇಲ್ಕಂಡ ಮಾರ್ಗಸೂಚಿಗಳನ್ನೊಳಗೊಂಡಿರದ ಪ್ರಸ್ತಾವೆಗಳನ್ನು ಅಪೂರ್ಣವೆಂದು ಕಾನೂನು ಕೋಶದ ಮುಖ್ಯಸ್ಥರು ಕಡತವನ್ನು ಹಿಂದಿರುಗಿಸುತ್ತಿರುವುದರಿಂದ, ಇನ್ನು ಮುಂದೆ ಸಲ್ಲಿಸುವ ಇಂತಹ ಅಪೂರ್ಣ ಪ್ರಸ್ತಾವೆಗಳನ್ನು ಯಾವುದೇ ಪತ್ರ ವ್ಯವಹಾರ ಮಾಡದೆ ಸರ್ಕಾರದ ಹಂತದಲ್ಲಿ ಖೈದುಗೊಳಿಸಲಾಗುವುದು. ಆದ್ದರಿಂದ, ಮೇಲೆ ತಿಳಿಸಿದ ಮಾಹಿತಿಯನ್ನು ಒಳಗೊಂಡ ಪ್ರಸ್ತಾವಗಳನ್ನು ಮಾತ್ರ ಸಲ್ಲಿಸಲು ಸೂಚಿಸಿದೆ.

(ಹೆಚ್.ಎಸ್.ನಾಗರಾಜಯ್ಯ),
**ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ**
**ಸರ್ಕಾರದ ಜಂಟಿ ಕಾರ್ಯದರ್ಶಿ,**
ಸಹಕಾರ ಇಲಾಖೆ.

<u>ಇವರಿಗೆ:-</u>

1. ಸಹಕಾರ ಸಂಘಗಳ ನಿಬಂಧಕರು, ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 52.
2. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು.
3. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು.
4. ಎಲ್ಲಾ ಉಪ ವಿಭಾಗಗಳ ಸಹಾಯಕ ನಿಬಂಧಕರು.
5. ಕಾರ್ಯದರ್ಶಿ, ಸಹಕಾರ ಚುನಾವಣಾ ಆಯೋಗ, ಬೆಂಗಳೂರು.

ಮು: 226